ಅಧ್ಯಕ್ಷರು: ಸ್ಪಷ್ಟೀಕರಣ ಕೇಳಿ ಒಂದು ಲೇಟರ್ ಕೊಡಿ. ನಾನು ಕಳುಹಿಸಿಕೊಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: Writing ಕೊಡಿ, ನಾನು ಮಾಹಿತಿ ಒದಗಿಸಿಕೊಡುವುದಕ್ಕೆ ಸಿದ್ದನಿದ್ದೇನೆ.

ಅಧ್ಯಕ್ಷರು: ಆಯಿತು, ನೀವು ಅದನ್ನು ಸ್ಪಷ್ಟೀಕರಣ ಮಾಡಿ ಲೆಟರ್ ಕೊಡಿ. ಸಿ.ಸಿ.ಪಾಟೀಲರೆ, ನೀವು ಕುಳಿತುಕೊಳ್ಳಿ. ನಾವೆಲ್ಲರೂ ಕೇಳುತ್ತೇವೆ. ಪುಟ್ಟೇಗೌಡರೆ, ಆ ಸ್ಪಷ್ಟೀಕರಣ ಕೊಟ್ಟು, ಒಂದು ಲೆಟರ್ ಕೊಡಿ.

ಶ್ರೀ ಸಿ.ಎಸ್.ಪುಟ್ಟೇಗೌಡ: ಪ್ರಿಂಟ್ ಆಗಿರುವುದು ತಪ್ಪಾಗಿದೆ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಸ್.ಸುರೇಶ್‌ಕುಮಾರ್: ಪುಟ್ಟೇಗೌಡರು ಮಾತನಾಡುತ್ತಾ, ಪ್ರಿಂಟ್ ಮಾಡುವುದರಲ್ಲಿ, ಟೈಪ್ ಮಾಡುವುದರಲ್ಲಿ ತಪ್ಪಾಗಿದೆಯೆಂದು ಹೇಳಿದರು. ಹೀಗೆ ಒಂದು ಪರೀಕ್ಷೆಯಲ್ಲಿ ಒಂದು ಪ್ರಶ್ನೆ ಕೇಳಿದರಂತೆ. ಮೊದಲನೆಯ ಪ್ರಶ್ನೆ: ಪ್ರಪಂಚದಲ್ಲಿರುವ ವಲಯಗಳೆಷ್ಟು? ಎರಡನೆಯ ಪ್ರಶ್ನೆ: ಪ್ರಪಂಚದಲ್ಲಿರುವ ಮೂರು ವಲಯಗಳ ಹೆಸರೇನು? ಮೂರನೆಯ ಪ್ರಶ್ನೆ: ಉಷ್ಣ ವಲಯ, ಶೀತ ವಲಯ ಮತ್ತು ಸಮ ಶೀತೋಷ್ಣ ವಲಯಗಳ ನಡುವಿನ ವ್ಯತ್ಯಾಸವೇನು ಎಂದು. ಆ ರೀತಿ ಕೇಳಿದ್ದರೆ, ಒಂದನೇ ಪ್ರಶ್ನೆಗೆ ಎರಡನೇ ಪ್ರಶ್ನೆ ಉತ್ತರ, ಎರಡನೇ ಪ್ರಶ್ನೆಗೆ ಮೂರನೇ ಪ್ರಶ್ನೆ ಉತ್ತರ ಎಂದು ಕೊಡಬಹುದಾಗಿತ್ತು! ಮಿಸ್ಟೇಕ್ ಆಗಿದೆ.

ಸಣ್ಣ ನೀರಾವರಿ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ

43(167)

ಶ್ರೀ ಸಿದ್ದು ಸವದಿ(ತೇರವಾಳ)

ಗೋವಿಂದ ಎಂ.ಕಾರಜೋಳ(ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು)

ಅ) 2009–10ನೆ ಸಾಲಿಗೆ ಸಣ್ಣ ನೀರಾವರಿ ಇಲಾಕೆಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು;

- 2009–10ನೇ ಆಯವ್ಯಯದಲ್ಲಿ ಲಭ್ಯವಾಗಿರುವ ಅನುದಾನದಿಂದ ಈಗಾಗಲೇ ಹಿಂದಿನ ಸಾಲುಗಳಲ್ಲಿ ಕೈಗೊಂಡು ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಮುಂದುವರೆಸುವುದು. ಅಲ್ಲದೆ, ಹೊಸಕರೆಗಳು, ಬಾಂದಾರಗಳು, ಪಿಕಪ್‌ಗಳು, ಏತ ನೀರಾವರಿ ಯೋಜನೆಗಳು, ಪ್ರವಾಹ ನಿಯಂತ್ರಣ ಕಾಮಗಾರಿಗಳು, ಅಸ್ತಿತ್ವದಲ್ಲಿರುವ

ಸಣ್ಣ ನೀರಾವರಿ ರಚನೆಗಳಿಗೆ ಅಗತ್ಯವಿರುವ ಕಡೆ ದುರಸ್ತಿ/ಸುಧಾರಣೆ ಕಾರ್ಯ ಕೈಗೊಳ್ಳಲಾಗುವುದು.

- ಇದಲ್ಲದೆ, ಕೇಂದ್ರ ಸರ್ಕಾರದ ಅನುದಾನದ ಎ.ಐ.ಬಿ.ಪಿ. ಯೋಜನೆಯಡಿ ಬರಪೀಡಿತ ಬರುವ ತಾಲ್ಲೂಕುಗಳಲ್ಲಿ ಸಣ್ಣ ನೀರಾವರಿಯ ಹೊಸ ಕಾಮಗಾರಿಗಳು ಹಾಗೂ ಮುಂದುವರೆದ ಕಾಮಗಾರಿಗಳನ್ನು ಪ್ರಸ್ತಾಪಿಸಲಾಗುತ್ತಿದೆ.

- ವಿಶೇಷ ಅಭಿವೃದ್ಧಿ ಯೋಜನೆಯಡಿ ಒದಗಿಸಿರುವ ಅನುದಾನದಿಂದ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಡಾ:ನಂಜುಂಡಪ್ಪ ವರದಿಯಂತೆ ಹಿಂದುಳಿದ ತಾಲ್ಲೂಕುಗಳಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಗುರುತಿಸಿ ಕೈಗೊಳ್ಳಲಾಗುತ್ತಿದೆ.

- ಸಣ್ಣ ನೀರಾವರಿ ಇಲಾಖೆಯಡಿ 2002ನೇ ಸಾಲಿನಿಂದ ಅಸ್ತಿತ್ವಕ್ಕೆ ಬಂದಿರುವ ಜಲಸಂವರ್ಧನೆ ಯೋಜನಾ ಸಂಘದ ಮೂಲಕ ವಿಶ್ವಬ್ಯಾಂಕ್ ನೆರವಿನಿಂದ ರಾಜ್ಯದಲ್ಲಿನ ಆಯ್ದ ತಾಲ್ಲೂಕುಗಳಲ್ಲಿ ಕೆರೆಗಳ ಅಭಿವೃದ್ಧಿ ಕಾರ್ಯವನ್ನು ಮುಂದುವರೆಸಲಾಗುತ್ತಿದೆ.

ಆ) ತೇರದಾಳ ಮತಕ್ಷೇತ್ರದಲ್ಲಿ ಇರುವ ಕೆರೆಗಳ ಅಭಿವೃದ್ಧಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು?

ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸಣ್ಣ ನೀರಾವರಿಗೆ ಒದಗಿಸಿರುವ ಅನುದಾನದ ಮರುಹಂಚಿಕೆಯ ಪ್ರಕ್ರಿಯೆ ನಡೆಯುತ್ತಿದೆ. ಈ ಕಾರ್ಯ ಪೂರ್ಣಗೊಂಡ ನಂತರ ತೇರದಾಳ ಮತಕ್ಷೇತ್ರಕ್ಕೆ ನಿಗದಿಪಡಿಸುವ ಅನುದಾನಕ್ಕನುಗುಣವಾಗಿ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುವುದು.

ಇ) 2008–09ನೇ ಸಾಲಿನ ಅವಧಿಯಲ್ಲಿ ಅಭಿವೃದ್ಧಿಗೊಳಿಸಿರುವ ಕೆರೆಗಳು ಯಾವುವು? (ತೇರದಾಳ ಮತ್ತು ಜಮಖಂಡಿ ಮತಕ್ಷೇತ್ರಕ್ಕೆ ಸಂಬಂಧಿಸಿದೆ ಮಾಹಿತಿ ನೀಡುವುದು)

ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಈ) ಸಣ್ಣ ನೀರಾವರಿ ಇಲಾಖೆಯಿಂದ ಕೆರೆಗಳ ಅಭಿವೃದ್ಧಿ ಹೊರತುಪಡಿಸಿ ಉಳಿದ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಉ) ಸಾಧಿಸಿದ ಪ್ರಗತಿ ಕುರಿತು ಮಾಹಿತಿ ನೀಡುವುದು.

ಅನುಬಂಧ–1 ಮತ್ತು 2ರಲ್ಲಿ ನೀಡಲಾಗಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ಸಿದ್ದಸವದಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:167ಕ್ಕೆ ಅನುಬಂಧ–1 2008–09ನೇ ಸಾಲಿನಲ್ಲಿ ಅಭಿವೃದ್ಧಿ ಪಡಿಸಿದ ಕೆರೆಗಳ ವಿವರ:

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ಕಾಮಗಾರಿ ಹೆಸರು	ಅಂದಾಜು ಮೊತ್ತ	ಅನುದಾನ	ವೆಚ್ಚ	ಸಾಧಿಸಿದ ಪ್ರಗತಿ
ಜಮಖಂಡಿ ಮತ ಕ್ಷೇತ್ರ					
1	ಸಿದ್ದಾಪೂರ ಕೆರೆ ಸುಧಾರಣೆ	20.00	6.00	8.35	ಪ್ರಗತಿಯಲ್ಲಿದೆ.
2	ಹುಲ್ಯಾಳ ಕೆರೆ ಸುಧಾರಣೆ	15.00	4.50	15.40	ಪೂರ್ಣಗೊಂಡಿದೆ.
3	ಲಿಂಗನೂರ ಕೆರೆ ಸುಧಾರಣೆ	15.00	4.50	15.48	ಪೂರ್ಣಗೊಂಡಿದೆ.
4	ಹಳಂಗಳಿ ಕೆರೆ ಸುಧಾರಣೆ	20.00	6.00	0.00	ಪ್ರಗತಿಯಲ್ಲಿದೆ.
5	ತುಂಗಳ ಕೆರೆ ಸುಧಾರಣೆ	25.00	7.50	0.00	ಪೂರ್ಣಗೊಂಡಿದೆ.
ತೇರದಾಳ ಮತಕ್ಷೇತ್ರ					
1	ಚಿಮ್ಮಡ ಕೆರೆ ಸುಧಾರಣೆ	10.00	3.00	10.26	ಪೂರ್ಣಗೊಂಡಿದೆ.
2	ಬನಹಟ್ಟಿ ಕೆರೆ ಸುಧಾರಣೆ	20.00	6.00	19.14	ಪೂರ್ಣಗೊಂಡಿದೆ.
3	ತೇರದಾಳ ಕೆರೆ ಸುಧಾರಣೆ	25.00	7.50	23.99	ಪೂರ್ಣಗೊಂಡಿದೆ.
4	ಗುಂಡದಬಾವಿ ಕೆರೆ ಸುಧಾರಣೆ	10.00	3.00	0.00	ಪ್ರಗತಿಯಲ್ಲಿದೆ.
5	ಹನಗಂಡಿ ಕೆರೆ ಸುಧಾರಣೆ	10.00	3.00	0.00	ಪ್ರಗತಿಯಲ್ಲಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ಸಿದ್ದಸವದಿ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 167ಕ್ಕೆ

ಅನುಬಂಧ–2

ಕೆರೆಗಳ ಅಭಿವೃದ್ಧಿ ಹೊರತುಪಡಿಸಿದಂತೆ ಇತರೆ ಕಾಮಗಾರಿಗಳ ವಿವರ.

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ಕಾಮಗಾರಿ ಹೆಸರು	ಅಂದಾಜು ಮೊತ್ತ	ಅನುದಾನ	ವೆಚ್ಚ	ಸಾಧಿಸಿದ ಪ್ರಗತಿ
ಜಮಖಂಡಿ ಮತಕ್ಷೇತ್ರ					
1	ನಾವಲಗಿ ಜಿನುಗು ಕೆರೆ	49.50	14.85	0.40	ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ಪಡೆಯಲಾಗಿದ್ದು, ಟೆಂಡರ ಕರೆಯಬೇಕಾಗಿದೆ.
2	ಸಾವಳಗಿ ಸೈಟ್-2 ಜಿನುಗು ಕೆರೆ	30.00	9.00	0.37	ಕೆಲಸ ಪ್ರಗತಿಯಲ್ಲಿದೆ.
3	ಕನ್ನೊಳ್ಳಿ ಹತ್ತಿರ ಬಂದಾರ ನಿರ್ಮಾಣ	50.00	15.00	0.30	ಕೆಲಸ ಪ್ರಗತಿಯಲ್ಲಿದೆ.
ತೇರದಾಳ ಮತಕ್ಷೇತ್ರ					
1	ಚಿಮ್ಮಡ ಜಿನುಗು ಕೆರೆ	50.00	15.00	0.40	ಕೆಲಸ ಪ್ರಗತಿಯಲ್ಲಿದೆ.
2	ಯಲ್ಲಟ್ಟಿ ಬಂದಾರ ಸುಧಾರಣೆ	30.00	9.00	0.00	ಕೆಲಸ ಪ್ರಗತಿಯಲ್ಲಿದೆ.

ಶ್ರೀ ಸಿದ್ದು ಸವದಿ: ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರಗಳನ್ನು ಒಧಗಿಸಿದ್ದಾರೆ. ಆದರೆ, ನಮ್ಮ ಕ್ಷೇತ್ರದಲ್ಲಿ ಬರುವ ನಾವಲಗಿ ಜಿನುಗು ಕೆರೆ ಮೊದಲು ಮಂಜೂರಾಗಿ ಎರಡು ವರ್ಷಗಳಾದರೂ ಪ್ರಾರಂಭವಾಗಿಲ್ಲ. ಅದಕಾರಣ, ಜಮೀನನ್ನು ವಸಪಡಿಸಿಕೊಂಡು ಕಾಮಗಾರಿಯನ್ನು ಯಾವಾಗ ಪ್ರಾರಂಭಿಸುತ್ತೀರಿ? ಇಷ್ಟು ವಿಳಂಬವಾದರೆ ಮತ್ತು ಅದೇ ವರ್ಷದಲ್ಲಿ ಕೆಲಸ-ಕಾರ್ಯಗಳಾದಲ್ಲಿ ಮುಂದಿನ ವರ್ಷದಿಂದಲಾದರೂ ಕೆರೆ ನೀರನ್ನು ಉಪಯೋಗಿಸಿಕೊಳ್ಳುವಂತೆ ಅನುಕೂಲ ಮಾಡಿಕೊಡುತ್ತೀರಾ ಎಂದು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಗೋವಿಂದ ಎಂ.ಕಾರಜೋಳ: ಸನ್ಮಾನ್ಯ ಸಭಾಧ್ಯಕ್ಷರೆ, ರೈತರ ಜಮೀನನ್ನು ವಶಪಡಿಸಿಕೊಳ್ಳಬೇಕಾದರೆ, Land acquisition Act ಕೆಳಗೆ ಪ್ರಾವಿಜನ್ ಇರುವುದನ್ನು ನಾವು ನೋಡಬೇಕಾಗುತ್ತದೆ. ಕೆಲವು ರೈತರು ತಮ್ಮ ಜಮೀನನ್ನು ಸರಳವಾಗಿ ಬಿಟ್ಟುಕೊಡುವುದಿಲ್ಲ. ಕೋರ್ಟು-ಕಚೇರಿಗಳಿಗೆ ಹೋಗುತ್ತಾರೆ. ಅಂತಹ ಸಂದರ್ಭದಲ್ಲಿ ವಿಳಂಬವಾಗುವುದು ಸಹಜ. ಅದಲ್ಲದೆ, 6(1) ನೋಟಿಫಿಕೇಷನ್ ಅನ್ನು ಸರ್ಕಾರದ ಕಂದಾಯ ಇಲಾಖೆಯಿಂದ ಅನುಮೋದಿಸಬೇಕಾಗುತ್ತದೆ. ಅದನ್ನು ತೆಗೆದು ಹಿಂದಿನ ಕ್ಯಾಬಿನೆಟ್‌ನಲ್ಲಿ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಡೆಲಿಗೇಟ್ ಮಾಡಲಾಗಿದೆ. ಇನ್ನು ಮುಂದೆ ವಿಳಂಬವಾಗುವುದಿಲ್ಲ. ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿದ್ದು ಸವದಿ: ನಮ್ಮ ತಾಲ್ಲೂಕಿನಲ್ಲಿ ಎರಡು ಕೆರೆಗಳಿವೆ. ಆ ಎರಡೂ ಕೆರೆಗಳಿಗೆ ನೀರು ತುಂಬಿಸುವ ಕೆಲಸವನ್ನು ಸರ್ಕಾರದ ಅನುದಾನದಿಂದ ನಾವು ಪ್ರಾರಂಭಿಸಿದ್ದೇವೆ. ಆದರೆ, ಇದು ಕುಡಿಯುವ ನೀರಿನ ಯೋಜನೆಯಲ್ಲಿ ಬರುತ್ತದೆಂದೂ, ನಮಗೆ ಬರುವುದಿಲ್ಲವೆಂದು ಮಾನ್ಯ ಸಣ್ಣ ನೀರಾವರಿ ಸಚಿವರು ಹೇಳುತ್ತಾರೆ. ಆದರೆ, ಸಂಘಗಳಿಂದ ಮೇಂಟನೆನ್ಸ್ ಆಗುವುದಿಲ್ಲ. ಆದಕಾರಣ, ಅದನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ಮೇಂಟನೆನ್ಸ್ ಮಾಡುವ ಮೂಲಕ ಕೆರೆ ತುಂಬಿಸುವುದರಿಂದ 4-5 ಹಳ್ಳಿಗಳಿಗೆ ಕುಡಿಯುವ ನೀರಿಗೆ ಉಪಯೋಗವಾಗುತ್ತದೆ. ಆದುದರಿಂದ, ಯಾವುದಾದರೊಂದು ಇಲಾಖೆಯು ವಶಪಡಿಸಿಕೊಂಡು ಸರ್ಕಾರ ನಡೆಸಿಕೊಡಬೇಕೆಂಬ ಮಾತನ್ನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ: 1987ರಲ್ಲಿ ಜಮಖಂಡಿ ತಾಲ್ಲೂಕಿನ ಕೆರೆಗಳನ್ನು ಕುಡಿಯುವ ನೀರಿಗಾಗಿ ಘಟಪ್ರಭಾ ನದಿಯ ಮುಖ್ಯ ಕಾಲುವೆಯಿಂದ ತುಂಬಿಸುವ ಕೆಲಸವನ್ನು ಜಿಲ್ಲಾ ಪರಿಷತ್‌ನವರು ಮಾಡಿದರು. ಅದಾದ ನಂತರ, ಅದನ್ನು ಮೇನ್‌ಟೇನ್ ಮಾಡುವುದಕ್ಕೆ ಪಂಚಾಯತ್‌ಗಳಿಗೆ ಸಾಧ್ಯವಾಗಲಿಲ್ಲ. ವಿದ್ಯುತ್ ಬಿಲ್ ಹೆಚ್ಚು ಬರುವುದರಿಂದ ಅವರು ಅದನ್ನು ಬಂದ್ ಮಾಡಿದ್ದಾರೆ. ಅದಕ್ಕೋಸ್ಕರ, ನಾನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆ ಸಚಿವರೊಂದಿಗೆ ಮಾತನಾಡುತ್ತೇನೆ. ಹೆಚ್ಚು ಅನುದಾನ ಕೊಟ್ಟು ಮತ್ತೆ ಒಂದು ಸಲ ಕೆಇಬಿ ಬಿಲ್ ಕಟ್ಟಿ ಚಾಲೂ ಮಾಡಬೇಕೆಂದು ನಾನು ಅವರಿಗೆ ವಿನಂತಿಸುತ್ತೇನೆ.

[ಗೊಂದಲ]

ಶ್ರೀ ಸಿದ್ದು ಸವದಿ :- ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಇಲ್ಲೇ ಇದ್ದಾರೆ.

[ಗೊಂದಲ]

ಅಧ್ಯಕ್ಷರು :- ಮಾನ್ಯ ಸಚಿವರು ಅವರೊಂದಿಗೆ ಸಮಾಲೋಚನೆ ಮಾಡಿ ಉತ್ತರ ಕೊಡುತ್ತಾರೆ. ವಿಧಾನ ಸಭೆಯಲ್ಲಿ ಸಮಾಲೋಚನೆ ನಡೆಸಲಿಕ್ಕಾಗುವುದಿಲ್ಲ.

ಎಲ್ಲಾ ಸಚಿವರ ಜೊತೆಗೆ ಇಲ್ಲೇ ಸಮಾಲೋಚನೆ ಮಾಡಿ ಎಲ್ಲವನ್ನು ಇಲ್ಲೇ ಬಗೆಹರಿಸಲಿಕ್ಕಾಗುವುದಿಲ್ಲ. ನೀವು ಅವರೊಂದಿಗೆ ಕುಳಿತು ಮಾತನಾಡಿ.

ಶ್ರೀ ಶ್ರೀಕಾಂತ್ ಕುಲಕರ್ಣಿ:– ಮಾನ್ಯ ಅಧ್ಯಕ್ಷರೆ, ಒಂದೇ ನಿಮಿಷ....

ಅಧ್ಯಕ್ಷರು :– ಮಾನ್ಯ ಕುಲಕರ್ಣಿಯವರೆ, ಈಗ ತಾವು ಮಾತನಾಡುವುದು ಬೇಡ. ನಾನು ಮಾನ್ಯ ಹುಕ್ಕೇರಿಯವರನ್ನು ಪ್ರಶ್ನೆ ಕೇಳಲು ಕರೆದಿದ್ದೇನೆ.

[ಗೊಂದಲ]

ಅಧ್ಯಕ್ಷರು:– ಮಾನ್ಯ ಸಿದ್ದು ಸವದಿಯವರು ಸಾಕಷ್ಟು ಕೇಳಿದ್ದಾರೆ. ಅದರ ಬಗ್ಗೆ ಈಗ ಸಾಕು. ನಾನು ಈಗಾಗಲೇ ಬೇರೆ ಪ್ರಶ್ನೆ ತೆಗೆದುಕೊಂಡಿದ್ದೇನೆ. ತಾವು ಈಗ ಮಾತನಾಡುವುದು ಬೇಡ.

[ಗೊಂದಲ]

ಶ್ರೀ ಶ್ರೀಕಾಂತ್ ಕುಲಕರ್ಣಿ:– ಮಾನ್ಯ ಅಧ್ಯಕ್ಷರೆ, ಜಮಖಂಡಿ ತಾಲ್ಲೂಕಿನ ಸಿದ್ದಾಪುರ ಕೆರೆಗೆ ಜಿಲ್ಲಾ ಪಂಚಾಯಿತಿಯ ಮೂಲಕ ಸುಮಾರು 8–10 ವರ್ಷಗಳಿಂದ ಪೈಪ್‌ಲೈನ್ ಮಾಡಿ, ನೀರು ತುಂಬಿಸತಕ್ಕಂಥ ಯೋಜನೆಯೊಂದನ್ನು ಮಾಡಿದ್ದಾರೆ. ಅದರ maintenance ಜವಾಬ್ದಾರಿಯನ್ನು ಯಾವ ಇಲಾಖೆಯವರೂ ತೆಗೆದುಕೊಂಡಿಲ್ಲ. ಈಗ ಕನಿಷ್ಠ 12–13 ಲಕ್ಷ ರೂ.ಗಳ ವಿದ್ಯುತ್ ಬಿಲ್ ಬಾಕಿ ಇದೆ. Maintenance ಮಾಡಲಿಕ್ಕೂ ಕೂಡ ಹಣಕಾಸಿನ ವ್ಯವಸ್ಥೆ ಇದೆ. ಆದ್ದರಿಂದ ಜಿಲ್ಲಾ ಪಂಚಾಯಿತಿಯ ಸಣ್ಣ ನೀರಾವರಿ ಇಲಾಖೆ ಅಥವಾ ಬೇರೆ ಯಾವುದಾದರೂ ಇಲಾಖೆ ಅದರ ಜವಾಬ್ದಾರಿಯನ್ನು ತೆಗೆದುಕೊಂಡು ಅದನ್ನು maintain ಮಾಡಿದರೆ ಸಿದ್ದಾಪುರ ಮತ್ತು ಇತರ ನಾಲ್ಕು ಗ್ರಾಮಗಳಲ್ಲಿ water table ಜಾಸ್ತಿಯಾಗಿ ಎಲ್ಲರಿಗೂ ಕೂಡ ಅನುಕೂಲವಾಗುತ್ತದೆ. ದಯವಿಟ್ಟು maintenance ಅನ್ನು ಯಾವುದಾದರೂ ಇಲಾಖೆಯವರಿಗೆ ಒಪ್ಪಿಸಿ, ಅದರ ಬಾಕಿ ವಿದ್ಯುತ್ ಬಿಲ್ಲನ್ನು ತುಂಬುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಕೋರುತ್ತೇನೆ. ಈ ಬಗ್ಗೆ ನಾನು ಬೆಳಗಾವಿಯಲ್ಲಿ ನಡೆದ ಅಧಿವೇಶನದ ಸಂದರ್ಭದಲ್ಲೂ ಸಹ ಸರ್ಕಾರದ ಗಮನ ಸೆಳೆದಿದ್ದೆ. ದಯವಿಟ್ಟು ...

ಅಧ್ಯಕ್ಷರು :– ಈ ಪ್ರಶ್ನೆಗೆ ಇದು ಸಂಬಂಧಿಸಿದಂತೆ ಇಲ್ಲ. ಪ್ರಶ್ನೆಗೆ ಸಂಬಂಧಪಟ್ಟಂತೆ ಮಾತ್ರವೇ ಉಪ ಪ್ರಶ್ನೆ ಕೇಳಿ. ಈ ವಿಷಯಕ್ಕೆ ಸಂಬಂಧಿಸಿದಂತೆ ತಾವು ಪ್ರತ್ಯೇಕವಾಗಿಯಾದರೂ ಪ್ರಶ್ನೆ ಕೇಳಿ.

[ಗೊಂದಲ]

ಅಧ್ಯಕ್ಷರು:– ನೀವೆಲ್ಲಾ ಅಕ್ಕಪಕ್ಕದ ಕ್ಷೇತ್ರಗಳಲ್ಲಿ ಇರುವವರು. ನೀವು ನಿಮ್ಮ ಸಮಸ್ಯೆಗಳನ್ನು ಅಲ್ಲೇ ಬಗೆಹರಿಸಿಕೊಳ್ಳಬಹುದು. ಇದನ್ನೆಲ್ಲಾ ಅಸೆಂಬ್ಲಿಯಲಿ ಕೇಳಿಕೊಂಡು ಕುಳಿತರೆ ಹೇಗೆ?

[ಗೊಂದಲ]

ಶ್ರೀ ಗೋವಿಂದ ಕಾರಜೋಳ:– ಮಾನ್ಯ ಅಧ್ಯಕ್ಷರೆ, ಕೃಷಿ ಭೂಮಿಗೆ ನೀರು ಒದಗಿಸತಕ್ಕದ್ದನ್ನು ಮಾತ್ರ ನಮ್ಮ ಇಲಾಖೆ ಮಾಡುತ್ತದೆ. ಕುಡಿಯುವ ನೀರಿಗೆ ಸಂಬಂಧಪಟ್ಟಿದ್ದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಗೆ ಬರುತ್ತದೆ. ಅವರಿಗೆ ನಾನು ಈ ಬಗ್ಗೆ ವಿನಂತಿ ಮಾಡುತ್ತೇನೆ.

ವಿಧವಾ ವೇತನದ ಬಗ್ಗೆ

43 ಶ್ರೀ. ಪ್ರಕಾಶ್ ಬಾಬಣ್ಣ ಹುಕ್ಕೇರಿ

ಶ್ರೀ.ಜಿ. ಕರುಣಾಕರ ರೆಡ್ಡಿ. (ಕಂದಾಯ ಸಚಿವರು)

ಅ) ಚಿಕ್ಕೋಡಿ ಸದಲಗ ಮತಕ್ಷೇತ್ರ ವ್ಯಾಪ್ತಿಯಲ್ಲಿರುವ ವಿಧವೆಯರ ಸಂಖ್ಯೆಯೆಷ್ಟು; ಆ ಪೈಕಿ ಎಷ್ಟು ವಿಧವೆಯರಿಗೆ ಸರ್ಕಾರದ ಯಾವ ಯೋಜನೆಯಡಿ ಮಾಸಿಕ ಸಹಾಯ ಧನ ನೀಡಲಾಗುತ್ತಿದೆ(ವಿವರ ನೀಡುವುದು);

ಈ ಬಗ್ಗೆ ಯಾವುದೇ ಸಮೀಕ್ಷೆ ಕೈಗೊಳ್ಳದಿರುವುದರಿಂದ ನಿಖರವಾದ ಮಾಹಿತಿ ಲಭ್ಯವಿರುವುದಿಲ್ಲ.

ಚಿಕ್ಕೋಡಿ ಸದಲಗ ಮತಕ್ಷೇತ್ರ ವ್ಯಾಪ್ತಿಯಲ್ಲಿ 3412 ವಿಧವೆಯರಿಗೆ ನಿರ್ಗತಿಕ ವಿಧವಾ ವೇತನದಡಿ ಮಾಸಿಕ ಸಹಾಯ ಧನ ನೀಡಲಾಗುತ್ತಿದೆ.

ಆ) ಸದರಿ ವಿಧವಾ ಫಲಾನುಭವಿಗಳ ಆಯ್ಕೆಯ ' ಮಾನದಂಡನೆಗಳೇನು; ಇನ್ನುಳಿದ ವಿಧವೆಯರಿಗೆ ಎಂದಿನಿಂದ ಮಾಸಿಕ ಸಹಾಯ ಧನವನ್ನು ನೀಡಲಾಗುವುದು?

ಅರ್ಜಿದಾರಳು 18 ವರ್ಷಕ್ಕಿಂತ ಹೆಚ್ಚು ವಯಸ್ಸಿನ ನಿರ್ಗತಿಕ ವಿಧವೆಯರಾಗಿದ್ದು, ರೂ 6000/–ಗಳಿಗೆ ಮೀರದ ವಾರ್ಷಿಕ ಆದಾಯವನ್ನು ಹೊಂದಿರಬೇಕು. ಅರ್ಜಿದಾರಳು ಅಥವಾ ಆಕೆಯ ಮರಣ ಹೊಂದಿದ ಪತಿಯು ಅರ್ಜಿ ಸಲ್ಲಿಸಿವ ದಿನಾಂಕದಿಂದ ಹಿಂದಿನ ನಿರಂತರ ಮೂರು ವರ್ಷಗಳ ಅವಧಿಗೆ ಕಡಿಮೆ ಇಲ್ಲದಂತೆ ಈ ರಾಜ್ಯದ ನಿವಾಸಿಯಾಗಿರಬೇಕು. ಇನ್ಯಾವುದೇ ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಪಡೆಯುತ್ತಿರಬಾರದು. ಮೃತರಾಗುವವರೆಗೆ ಅಥವಾ ಪುನರ್ವಿವಾಹ ಆಗುವವರೆಗೆ, ಉದ್ಯೋಗ ಪಡೆದು ವಾರ್ಷಿಕ ಆದಾಯ ರೂ.6000/– ಕ್ಕಿಂತ ಹೆಚ್ಚಿಗೆ ಪಡೆಯುವವರೆಗೆ ವಿಧವಾ ವೇತನವನ್ನು ಪಡೆಯಬಹುದು.

ಜನನ ಪ್ರಮಾಣ ಪತ್ರ, ವೈದ್ಯಕೀಯ ದೃಢೀಕರಣ ಪತ್ರ ಅಥವಾ ಭಾರತ ಚುನಾವಣಾ ಆಯೋಗವು ನೀಡಿರುವ ಮತದಾರರ ಗುರುತಿನ ಚೀಟಿಯಲ್ಲಿರುವ ಜನ್ಮ ದಿನಾಂಕವು ವಯಸ್ಸಿಗೆ ಸಂಬಂಧಿಸಿದ ದಾಖಲೆಯಾಗಿರುತ್ತದೆ.

ಯೋಜನೆಯಡಿ ಅರ್ಹ ನಿರ್ಗತಿಕ ವಿಧವೆಯರು ಅರ್ಜಿಯನ್ನು ಸಲ್ಲಿಸಿದ ನಂತರ ನಿಯಮಾವಳಿಗಳ ಪ್ರಕಾರ ಮಾಸಾಶನ ಮಂಜೂರು ಮಾಡಲಾಗುವುದು.